೩) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಪಾರ್ಟ್ ಟೈಂ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವುದು.

ಶ್ರೀ ಟಿ. ಬಿ. ಜಯಚಂದ್ರ.—ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ೬೦೦ ಜನ ಪಾರ್ಟ್‌ಟೈಂ ಉಪನ್ಯಾಸಕರು ಕೇವಲ ೬೦೦ ರೂಪಾಯಿಗಳ ಸಂಬಳ ಪಡೆದು ೮ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವುದರಿಂದ ಅವರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ವ್ಯವಸಾಯ ಮತ್ತು ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

MR. SPEAKER.—I just have got to make a statement. ಈ ಸಭೆಯಲ್ಲಿ ಒಂದು ಡೆಕೋರಮ್ ಇರಬೇಕಾಗುತ್ತದೆ. ನಾನು ಕಳೆದ ನಾಲ್ಕಾರು ದಿವಸಗಳಿಂದಲೂ ನೋಡುತ್ತಿದ್ದೇನೆ. treasury benches are getting crowded and it does not really bring credit to the house. ಆದ್ದರಿಂದ, ಆದಷ್ಟು ಮಾನ್ಯ ಮಂತ್ರಿಗಳು ಸದನದಲ್ಲಿ ಏನು ನಡೆಯುತ್ತದೆ. ಆ ವ್ಯವಹಾರಗಳ ಬಗ್ಗೆ ಗಮನ ಇಟ್ಟು ಕೇಳಲು ಮಾನ್ಯ ಸದಸ್ಯರು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಹೆಚ್ ರಂಗನಾಥ್ (ಶಿಕ್ಷಣ ಸಚಿವರು).—ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಕಾಲೇಜುಗಳಲ್ಲಿರುವ ಬೋಧಕ ಕಾರ್ಯಭಾರವನ್ನು ನಿರ್ವಹಿಸಲು ಪೂರ್ಣಕಾಲಿಕ ಉಪನ್ಯಾಸಕರ ಕೊರತೆ ಇದ್ದಾಗ ಅಂಶಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವ ಪದ್ಧತಿ ಬಹಳ ಹಿಂದಿನಿಂದಲೂ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುತ್ತದೆ. ೧೯೮೨-೮೩ನೇ ಶೈಕ್ಷಣಿಕ ವರ್ಷಕ್ಕಿಂತ ಮೊದಲು ಅವರ ಸಂಖ್ಯೆ ಕಡಿಮೆ ಇರುತ್ತದೆ. ಆದರೆ, ೧೯೮೨-೮೩ ರಿಂದ ೧೯೮೯-೯೦ರ ಅವಧಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ೩೨ ರಿಂದ ೪೮ಕ್ಕೆ ಏರಿದುದರಿಂದ, ಆ ಅವಧಿಯಲ್ಲಿ ಅಂಶಕಾಲಿಕ ಉಪನ್ಯಾಸಕರ ಸಂಖ್ಯೆಯೂ ಸಹ ೪೫೩ ರಿಂದ ೧೫೦೦ಕ್ಕೆ ಹೆಚ್ಚಿರುತ್ತದೆ.

೨) ೧೯೮೨-೮೩ ರಿಂದ ೧೯೮೯-೯೦ರ ಅವಧಿಯಲ್ಲಿ ಉಪನ್ಯಾಸಕರ ಹುದ್ದೆಗಳೂ ಸಹ ೧೩೬೭ ರಿಂದ ೧೯೬೨ರವರೆಗೆ ಹೆಚ್ಚಾಗಿದ್ದರೂ ಅವುಗಳನ್ನು ಈಗಾಗಲೇ ಗುರುತ್ತಿಗೆ ಆಧಾರಿತ ಇತರೆ ರೀತಿಯಲ್ಲಿ ಸಕ್ಷಮವಾಗಿ ನೇಮಕ ಹೊಂದಿದ ಉಪನ್ಯಾಸಕರಿಂದ ತುಂಬಲಾಗಿದೆ.

೩) ಈಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಬೋಧನ ಕಾರ್ಯಭಾರವನ್ನು ಈಗಿರುವ ಪೂರ್ಣಕಾಲಿಕ ಉಪನ್ಯಾಸಕರುಗಳಿಂದ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗದ ಕಾರಣ, ಕಾಲೇಜುಗಳು ಸುಗಮವಾಗಿ ನಡೆಯಲು ಹಾಗೂ ವಿದ್ಯಾರ್ಥಿಗಳಿಂದ ಆಗುವಂತಹ ಮಾಸ್ಯರವನ್ನು ತಪ್ಪಿಸಲು ಅಂಶಕಾಲಿಕ ಉಪನ್ಯಾಸಕರುಗಳ ನೇಮಕಾತಿಯು ಅನಿವಾರ್ಯವಾಯಿತು.

೪) ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಅರ್ಹತೆ ಹೊಂದಿರುವ ಲಭ್ಯವಿರುವ ಸ್ಥಳೀಯರನ್ನು ಅಂಶಕಾಲಿಕ ಉಪನ್ಯಾಸಕರುಗಳನ್ನಾಗಿ ನೇಮಿಸಿಕೊಂಡು ನಂತರ ಅದಕ್ಕೆ ಕಾಲೇಜು ಶಿಕ್ಷಣ ನಿರ್ದೇಶಕರ ಅನುಮೋದನೆಯನ್ನು ಪಡೆಯುತ್ತಾರೆ ಪ್ರಾಂಶುಪಾಲರುಗಳಿಂದ. ಈ ಬಗ್ಗೆ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ಕಾಲೇಜು ಶಿಕ್ಷಣ ನಿರ್ದೇಶಕರು ಅವುಗಳಿಗೆ ಸಂಬಂಧಿಸಿದಂತೆ ನೇಮಕಾತಿ ಆದೇಶಗಳನ್ನು ಹೊರಡಿಸುತ್ತಾರೆ.

೫) ಈ ಅಂಶಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡುವ ಮುನ್ನ ಜಾಹೀರಾತು ನೀಡಿ ಅವರನ್ನು ಯಾವುದೇ ನೇಮಕಾತಿ ಏಜೆನ್ಸಿಯಿಂದ ನೇಮಕ ಮಾಡಲಾಗುವುದಿಲ್ಲ. ಅದಲ್ಲದೆ, ಅಂತಹ ನೇಮಕಾತಿಯ ಸಮಯದಲ್ಲಿ ವ್ಯಂದ ಹಾಗೂ ನೇಮಕಾತಿ ನಿಯಮಗಳನ್ನಾಗಲೀ ಅಥವಾ ರೋಸ್ಟರ್ ಆಗಲಿ ಅನುಸರಿಸಲಾಗುವುದಿಲ್ಲ. ಏನೇಕ ಅಂಶಕಾಲಿಕ ಉಪನ್ಯಾಸಕರು ಒಂದಕ್ಕಿಂತ ಹೆಚ್ಚಿನ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದು. ಅವರು ಕೆಲಸ ಮಾಡುತ್ತಿರುವ ಹುದ್ದೆಗಳು ಮಂಜೂರಾದ ಹುದ್ದೆಗಳಾಗಿರುವುದಿಲ್ಲ.

೬) ಒಬ್ಬ ಪೂರ್ಣಾವಧಿಯ ಉಪನ್ಯಾಸಕರ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಎರಡು ಅಂಶಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಪ್ರತಿಯೊಬ್ಬ ಅಂಶಕಾಲಿಕ ಉಪನ್ಯಾಸಕರು ಪೂರ್ಣಕಾಲಿಕ ಉಪನ್ಯಾಸಕರ ಅರ್ಧದಷ್ಟು ಕಾರ್ಯಭಾರವನ್ನು ನಿರ್ವಹಿಸುತ್ತಾರೆ.

೭) ಅಂಶಕಾಲಿಕ ಉಪನ್ಯಾಸಕರುಗಳು ಪ್ರತಿನಿತ್ಯ ಕಾಲೇಜಿಗೆ ಬರಬೇಕೆಂದಾಗಲೀ ಅಥವಾ ಎಲ್ಲ ಕೆಲಸದ ದಿನಗಳಲ್ಲಿ ಕಾಲೇಜಿನಲ್ಲಿರಬೇಕೆಂದಾಗಲೀ ನಿರ್ಬಂಧವಿರುವುದಿಲ್ಲ. ಆದ್ದರಿಂದ, ಅವರು ತಮ್ಮ ಕೆಲಸವಿರುವ ದಿನಗಳಲ್ಲಿ ಕಾಲೇಜಿಗೆ ಬಂದು ಕೆಲಸ ಮುಗಿದ ಕೂಡಲೇ ಕಾಲೇಜನ್ನು ಬಿಡುತ್ತಾರೆ.

೮) ಈಗಿರುವ ಸರ್ಕಾರಿ ಆದೇಶಗಳ ಪ್ರಕಾರ ಅವರಿಗೆ ತಿಂಗಳೊಂದಕ್ಕೆ ರೂ. ೬೦೦-೦೦ರ ಗರಿಷ್ಟ ಮಿತಿಯ ಭತ್ಯೆಯನ್ನು ನೀಡಲಾಗುತ್ತಿದ್ದು, ಕ್ರಮವಾಗಿ ಒಂದು ಗಂಟೆಯ ಬೋಧನಾ ಕಾರ್ಯ ಭಾರಕ್ಕೆ ರೂ. ೭೫-೦೦ರಂತೆ ಹಾಗೂ ಪ್ರಾಯೋಗಿಕ ಕಾರ್ಯಭಾರಕ್ಕೆ ರೂ. ೫೦-೦೦ರಂತೆ ಆ ಭತ್ಯೆಯ ದರವಾಗಿರುತ್ತದೆ.

೯) ೧೯೮೮-೮೯ನೇ ಸಾಲಿನಲ್ಲಿ ೧೫೭೯ ಅಂಶಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಅವರುಗಳಲ್ಲಿ ೬೯೭ ಜನ ಸದರಿ ವರ್ಷದ ಅಂತ್ಯದಲ್ಲಿ ತಮ್ಮನ್ನು ಸೇವೆಯಿಂದ ತೆಗೆಯದಿರುವಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ ಮಧ್ಯಂತರ ತೀರ್ಪನ್ನು ತಂದಿದ್ದರಿಂದ ಅವರನ್ನು ಕಳಿದ ವರ್ಷದ ಬೇಸಿಗೆ ರಜೆಯಲ್ಲಿಯೂ ಮುಂದುವರೆಸಲಾಗಿದೆ.

೧೦ ಮೇಲೆ ಹೇಳಿದ ೬೯೭ ಅಂಶಕಾಲಿಕ ಉಪನ್ಯಾಸಕರುಗಳ ಜೊತೆಗೆ ೧೯೮೯-೯೦ನೇ ಸಾಲಿನಲ್ಲಿ ೯೦೦ ಹೆಚ್ಚುವರಿ ಅಂಶಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಅವರಲ್ಲಿ ೩೫೨ ಜನ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

೧೧) ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿರುವ ಅಂಶಕಾಲಿಕ ಉಪನ್ಯಾಸಕರ ಬೇಡಿಕೆಗಳು ಈ ಕೆಳಗಿನಂತಿವೆ :—

ಅ) ಅವರು ಸೇವೆಯನ್ನು ಸಲ್ಲಿಸುತ್ತಿರುವ ದಿನಾಂಕದಿಂದ ಉಪನ್ಯಾಸಕರ ಹುದ್ದೆಯ ಕಾಲಿಕ ವೇತನ ಶ್ರೇಣಿಯನ್ನು ವಿಸ್ತರಿಸುವುದು ಅಥವಾ ತಿಂಗಳಿಗೆ ರೂ. ೧೦೦೦-೦೦ದಂತೆ ತಿಂಗಳ ಭತ್ಯೆ ನೀಡುವುದು.

ಆ) ಪೂರ್ಣಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ ಆದ್ಯತೆ ನೀಡುವುದು.

ಇ) ಸೇವೆಯಿಂದ ತೆಗೆದು ಹಾಕದೇ ಇರುವುದು.

೧೨) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಇದುವರೆಗೆ ೧೧ ಅಂಶಕಾಲಿಕ ಉಪನ್ಯಾಸಕರು ಸಲ್ಲಿಸಿದ್ದ ಅರ್ಜಿಗಳನ್ನು ತೀರ್ಮಾನಿಸಲಾಗಿದ್ದು, ಅವರಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ. ಆದರೆ, ೩ ಅರ್ಜಿದಾರರಿಗೆ ಸಂಬಂಧಿಸಿದ ಅರ್ಜಿಗಳಲ್ಲಿ ತಿಳಿಸಿರುವ ಪ್ರಕಾರ ಅಂಶಕಾಲಿಕ ಉಪನ್ಯಾಸಕರು ತಮ್ಮ ಭತ್ಯೆಯ ಮೊತ್ತವನ್ನು ಹೆಚ್ಚಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿದರೆ, ಅವುಗಳನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

೧೩) ಇಲಾಖೆಯಲ್ಲಿ ಉಪನ್ಯಾಸಕರುಗಳ ಹುದ್ದೆಗಳನ್ನು ಸೃಷ್ಟಿಸಿದಾಗ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಅವುಗಳನ್ನು ಲೋಕಸೇವಾ ಆಯೋಗದಿಂದ ತುಂಬಬೇಕಾಗುತ್ತದೆ. ಆಗ ಅಂಶಕಾಲಿಕ ಉಪನ್ಯಾಸಕರು ಅರ್ಜಿ ಸಲ್ಲಿಸಬಹುದು.

ಶ್ರೀ ಟಿ. ಬಿ. ಜಯಚಂದ್ರ.—ಪಾರ್ಟ್ ಟೈಂ ಶಿಕ್ಷಕರನ್ನು ನೇಮಕ ಮಾಡಬೇಕಾದರೆ ಪೆರಿಗೆ ರಜೆ, ಸಿಕ್ ಲೀವ್ ಯಾರು ಹೋಗಿರುತ್ತಾರೆ ಅಂತಹ ಕಡೆಗಳಲ್ಲಿ ನೇಮಕ ಮಾಡುತ್ತಾರೆ. ಹೀಗೆ ನೇಮಕ ಮಾಡಿ ಆದೇಶವನ್ನು ೩-೪ ತಿಂಗಳು ಇಟ್ಟುಕೊಂಡಿದ್ದರೆ ಅವರಿಗೆ ೬೦೦ ರೂಪಾಯಿ ಕೊಡತಕ್ಕಂಥಾದ್ದು ಸಾಕು ಎಂದು ಹೇಳಬಹುದಿತ್ತು. ಆದರೆ ೫-೬ ವರ್ಷಗಳ ಕಾಲ ಇಟ್ಟುಕೊಂಡು ಅವರಿಂದ ದುಡಿಸಿಕೊಂಡಿದ್ದೀರಿ. ನಾನು ಇಲ್ಲಿ ಹೇಳತಕ್ಕಂಥಾದ್ದು ಏನು ಇದೆ ಅದು ನಿಮ್ಮ ಅಧಿಕಾರಿಗಳು ಕೊಟ್ಟ ಉತ್ತರಕ್ಕೆ ಸ್ವಲ್ಪ ಭಿನ್ನವಾಗಿರುತ್ತದೆ. ಅವರು ಪಾರ್ಟ್ ಟೈಂ ಟೀಚರ್ಸ್ ಅಂದರೆ ಬೆಳಗಿನಿಂದ ಸಂಜೆಯವರೆಗೂ ಕೆಲಸ ಮಾಡಬೇಕಾಗುತ್ತದೆ. ಒಬ್ಬ ಟೀಚರ್ ಬರಲಿಲ್ಲವೆಂದರೆ ನೀವು ಆ ಕ್ಲಾಸ್ ತೆಗೆದುಕೊಳ್ಳಿ ಎಂದು ಪ್ರಿನ್ಸಿಪಾಲರು ಹೇಳುತ್ತಾರೆ ಆಗ ಅವರು ತೆಗೆದುಕೊಳ್ಳಬೇಕಾಗುತ್ತದೆ. ಒಂದು ಪೀರಿಯಡ್ ಗೋಸ್ಕರ ಒಂದು ದಿವಸ ಕಾಯಬೇಕಾಗುತ್ತದೆ. ಭಾನುವಾರ ಕೂಡ ಕೆಲಸ ಮಾಡುತ್ತಾ ಇರತಕ್ಕಂಥಾದ್ದು ನಮ್ಮ ಗಮನಕ್ಕೆ ಬಂದಿದೆ. ಖಾಲಿ ಹುದ್ದೆಗಳನ್ನು ಸೃಷ್ಟಿಸಿದಾಗ, ಲೋಕಸೇವಾ ಆಯೋಗದ ಮೂಲಕ ಅರ್ಜಿಗಳನ್ನು ಹಾಕಬಹುದು ಎಂದು ತಿಳಿಸಿದ್ದೀರಿ. ಯಾವ ರೀತಿ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಕನ್ಫರ್ಮ್ ಮಾಡಿದಿರಿ ಅದೇ ರೀತಿ ಇವರನ್ನೂ ನೇಮಕ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ? ೩೨ ರಿಂದ ೪೦ಕ್ಕೆ ಕಾಲೇಜುಗಳನ್ನು ಹೆಚ್ಚು ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಅರೆಕಾಲಿಕ ಶಿಕ್ಷಕರಿಲ್ಲದೆ ಕಾಲೇಜುಗಳಲ್ಲಿ ಪಾಠ ಪ್ರವಚನ ನಡೆಯದೆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ

ಯಾಗುವ ಸ್ಥಿತಿಯಲ್ಲಿ ಇವರು ಸಹಾಯ ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಇವರನ್ನು ಕನ್‌ಫರ್ಮ್ ಮಾಡಬೇಕು. ಇದಕ್ಕೆ ನೀತಿ ನಿಯಮಗಳನ್ನು, ರೂಲ್ಸ್‌ರ್ ಪದ್ಧತಿಯನ್ನು ಅನುಸರಿಸಿ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದ್ಯತೆಯ ಮೇಲೆ ಇವರನ್ನು ಖಾಯಂ ಮಾಡ ಬೇಕು. ಕರ್ನಾಟಕ ಆಡಳಿತ ನ್ಯಾಯ ಮಂಡಲಿಯ ಜಡ್ಜ್‌ಮೆಂಟ್ ಏನು ಇದೆ ಅದರ ಬಗ್ಗೆ ಹೇಳಿದಿರಿ. ಈ ಮೂರು ಅಂಶಗಳನ್ನು ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ೬೦೦ ರಿಂದ ೧೦೦೦ ರೂಪಾಯಿಗೆ ಭತ್ಯವನ್ನು ಏರಿಸುವ ಪ್ರಯತ್ನವನ್ನು ನೀವು ಮಾಡಬೇಕು. ಮತ್ತು ಅವರನ್ನು ಯಾವ ಕಾಲದಲ್ಲೂ ಕೂಡ ಸೇವೆಯಿಂದ ತೆಗೆದುಹಾಕಬಾರದು ಮತ್ತು ಕೆ. ಪಿ. ಎಸ್. ಸಿ ಮೂಲಕ ಇವರನ್ನು ಆದ್ಯತೆ ಮೇಲೆ ನೇಮಕ ಮಾಡಿಕೊಳ್ಳಬೇಕು. ಈ ಬಗ್ಗೆ ತಮ್ಮ ನಿರ್ಧಾರವನ್ನು ಪ್ರಕಟಿಸಬೇಕು ಎಂದು ಎಲ್ಲಾ ನೌಕರರ ಪರವಾಗಿ ನಾನು ವಿನಂತಿಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೆ, ಈ ಶಿಕ್ಷಕರದು ಬಹಳಷ್ಟು ಸಮಸ್ಯೆಯಾಗಿದೆ ಆ ಕೊರತೆ ತುಂಬುವಾಗ ಕಂಟ್ರಾಕ್ಟ್ ಆಧಾರದ ಮೇಲೆಯಾಗಲೀ ಇಲ್ಲವೇ ಏರಿಕಾಲಿಕ ಶಿಕ್ಷಕರನ್ನು ನೇಮಿಸಿಕೊಂಡು ಅವರಿಗೆ ಸೇವಾ ಭದ್ರತೆಯಿಲ್ಲದೆ ತುಂಬಾ ತೊಂದರೆಯಲ್ಲಿದ್ದು ಮುಷ್ಕರ ಮಾಡ ತಕ್ಕಂತಹ ಪರಿಪಾಠ ಬೆಳೆದು ಬಂದಿದೆ. ಈ ಸಮಸ್ಯೆಯನ್ನು ನಿರಂತರವಾಗಿ ಬಗೆಹರಿಸಲು ಸರಕಾರ ಏನು ಕ್ರಮ ಕೈಗೊಳ್ಳುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮಾನ್ಯ ಜಯಚಂದ್ರವರವರು ಹೇಳಿದಂತೆ ಕೆ.ಪಿ.ಎಸ್.ಸಿ. ಮತಿಯಿಂದ ಇವರನ್ನು ಕ್ರಮಗೊಳಿಸುವುದಕ್ಕೆ ಸರಕಾರ ಕ್ಷಿಪ್ರ ಕ್ರಮ ತೆಗೆದುಕೊಳ್ಳಬೇಕು. ಅದೇ ರೀತಿ ಮಾನವೀಯತೆಯ ದೃಷ್ಟಿಯಿಂದ ಇವರಿಗೆ ಕೊಡುತ್ತಿರುತಕ್ಕಂತಹ ಭತ್ಯೆಯನ್ನು ಹೆಚ್ಚಿಸಿ ಅವರ ಬದುಕಿಗೆ ನೆಮ್ಮದಿಯನ್ನು ತಂದು ಕೊಡಬೇಕೆಂದು ನಾನು ಸಲಹೆ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇವತ್ತಿನ ಈ ಸಮಸ್ಯೆಗೆ ಒಳಗಾಗಿರುವವರು ೧೫೦೦ ಡಿಗ್ರಿ ಕಾಲೇಜುಗಳಲ್ಲಿರತಕ್ಕ ಪಾರ್ಟ್‌ಟೈಂ ಲೆಕ್ಚರರ್ಸ್. ಇವರ ಸಮಸ್ಯೆ ಬಹಳ ದೊಡ್ಡ ಸಮಸ್ಯೆ ಯಾಗಿದೆ. ಇದು ಹೇಗೆ ಹುಟ್ಟಿತು ಯಾರು ಇವರ ನೇಮಕಾತಿಯ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡರು, ಈರೀತಿ ನೇಮಕಾತಿಯನ್ನು ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಪಟ್ಟರು ಎನ್ನತಕ್ಕಂಥಾದ್ದು ನಿಜವಾಗಿ, ನನಗಂತೂ ಅರ್ಥವಾಗಿಲ್ಲ. ಯಾವುದೇ ಒಂದು ಕಾಲೇಜಿಗಾಗಲಿ, ಹೈಸ್ಕೂಲಿಗಾಗಲಿ ಎಷ್ಟು ಜನ ಉಪಾಧ್ಯಾಯರಿರಬೇಕು ಎಷ್ಟು ಜನ ಲೆಕ್ಚರರ್ಸ್ ಇರಬೇಕು, ಎಷ್ಟು ಜನ ಪ್ರೊಫೆಸರ್ಸ್ ಇರಬೇಕು ಎಂಬುದಕ್ಕೆ ನಿಯಮಾವಳಿಗಳಿವೆ. ಇಷ್ಟು ಜನ ವಿದ್ಯಾರ್ಥಿಗಳಿಗೆ ಒಬ್ಬ ಲೆಕ್ಚರರ್ ಇರಬೇಕು ಅಥವಾ ಉಪಾಧ್ಯಾಯನಿ ಇರಬೇಕು ಎಂದು ಸ್ಪಷ್ಟವಾಗಿದೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ೧೯೮೨-೮೩ ರಿಂದ ೧೯೮೯-೯೦ ರವರೆಗೆ ಕಾಲೇಜುಗಳು ಬಹಳ ಸಂಖ್ಯೆಯಲ್ಲಿ ಬೆಳೆದಿವೆ. ಅವತ್ತು ೩೨ ಕಾಲೇಜುಗಳು ಇದ್ದುದು ಇವತ್ತು ೯೮ ಕಾಲೇಜುಗಳಾಗಿವೆ. ಒಂದು ಕಾಲೇಜು ಸ್ಥಾಪನೆಯಾದರೆ ಎಷ್ಟು ಜನ ಸೈನ್ಸ್ ಲೆಕ್ಚರರ್ಸ್ ಬೇಕು, ಎಷ್ಟು ಜನ ಇಂಗ್ಲಿಷ್ ಲೆಕ್ಚರರ್ಸ್ ಬೇಕು, ಎಷ್ಟು ಜನ ಆರ್ಟ್ಸ್ ಲೆಕ್ಚರರ್ಸ್ ಬೇಕು ಎನ್ನುವ ಬಗ್ಗೆ ಒಂದು ಸೈಂಟಿಫಿಕ್ ಅಸೆಸ್‌ಮೆಂಟ್ ಇರುತ್ತದೆ. ಅಷ್ಟು ಸಂಖ್ಯೆಯ ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿರುವಾಗ ಅದರ ಆಧಾರದಮೇಲೆ ನೇಮಕಾತಿಯನ್ನು ಮಾಡಿಕೊಂಡಿದ್ದರೆ ಇವತ್ತು ೬೦೦ ರೂಪಾಯಿಗಾಗಿಗೆ ಈ ಲೆಕ್ಚರರ್ಸ್ ತಮ್ಮನ್ನು ಅರ್ಪಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಖಂಡಿತವಾಗಿಯೂ ಬರುತ್ತಿರಲಿಲ್ಲ. ಇವತ್ತು ನಮಗೆ ೧೦೦೦ ರೂಪಾಯಿ ಸಂಬಳ ಕೊಟ್ಟರೆ ಸಾಕು ಎನ್ನತಕ್ಕ ಪರಿಸ್ಥಿತಿ ಅವರಿಗೆ ಬರುತ್ತಿರಲಿಲ್ಲ. ಇವತ್ತು ಏನು ೧೫೦೦ ಜನ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ ಇಷ್ಟು ಪೋಸ್ಟ್‌ಗಳೂ ಕೂಡ ಮಂಜೂರಾದ ಪೋಸ್ಟ್ ಗಳಲ್ಲ. ಸರ್ಕಾರ ಈ ಹುದ್ದೆಗಳಿಗೆ ಅನುಮತಿ ಕೊಟ್ಟಿಲ್ಲ ಕಾರಣಾಂತರದಿಂದ ಇವರನ್ನು ನೇಮಕಾತಿ ಮಾಡಿಕೊಂಡು ಹಾಗೆಯೇ ಮುಂದುವರಿಸಿಕೊಂಡು ಬಂದಿದ್ದಾರೆ, ಒಬ್ಬ ಪೂರ್ಣಕಾಲಿಕ ಲೆಕ್ಚರರ್ ಬೇಕಾದ ಕಡೆಗೆ ಇವರು ಇಬ್ಬರನ್ನು ಪಾರ್ಟ್ ಟೈಂ ಲೆಕ್ಚರರ್‌ಗಳನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ವರ್ಕಿಂಗ್ ಟೈಂ ಎಷ್ಟು ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಅವರು ನಿಯಮಿತ ಕಾಲದಲ್ಲಿ ಶಾಲೆಗೆ ಬರಬೇಕು ಇರಬೇಕು ಎಂಬ ನಿಯಮವಿಲ್ಲ. ಇವನೆಲ್ಲಾ ನಾನು ಪ್ರಸ್ತಾಪ ಮಾಡಿದ್ದೇನೆ. ಇಂತಹ ಪರಿಸ್ಥಿತಿಗೆ ತಂದು ಮುಟ್ಟಿಸಿದ್ದಾರೆ ಇದರ ಬಗ್ಗೆ ನಾವು ಒಂದು ತೀರ್ಮಾನ ವನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ ಎಷ್ಟು ಜನ ಲೆಕ್ಚರರ್ ಬೇಕಾಗುತ್ತದೆ, ಎಂಬುದನ್ನು ಲೆಕ್ಕ ಹಾಕಿ ಅದಕ್ಕನುಗುಣವಾಗಿ ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿ ಕಾನೂನು ಪ್ರಕಾರ ಆ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಬೇಕಾಗುತ್ತದೆ. ಈ ಲೆಕ್ಚರರ್ಸ್ ಬಗ್ಗೆ ನನಗೆ ಎಷ್ಟೇ ಅನುಕಂಪವಿದ್ದರೂ ಕೂಡ ನಾನು ಹೀಗೇ ಮಾಡುತ್ತೇನೆ ಎಂದು ಸದನದ ಮುಂದೆ ಹೇಳಲಿಕ್ಕೆ ಸಿದ್ಧನಾಗಿಲ್ಲ. ತಯಾರಾಗಿಲ್ಲ ಏಕೆಂದರೆ, ಸಮಸ್ಯೆ ಬಹಳ ದೊಡ್ಡದಾಗಿರುವುದರಿಂದ ಕೂಲಂ

ಕಷವಾಗಿ ಪರಿಶೀಲಿಸಬೇಕಾಗುತ್ತದೆ. ಹಣಕಾಸಿನ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಲಿ ಎಷ್ಟು ಜನ ಬೇಕು ಎಂದು ಸರಿಯಾಗಿ ಅಸೆಸ್ ಮಾಡಿಸಬೇಕಾಗುತ್ತದೆ. ಆದ್ದರಿಂದ ನಾನು ತಕ್ಷಣವೇ ಇಲ್ಲಿ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಇವತ್ತು ಇವರಿಗೆ ಈ ಒಂದು ಪರಿಸ್ಥಿತಿ ಬರಬಾರದಾಗಿತ್ತು ಎಂದು ನನಗೂ ಅನಿಸುತ್ತದೆ. ಆದರೆ ಈ ಪರಿಸ್ಥಿತಿಗೆ ಇವರನ್ನು ಯಾರು ತಳ್ಳಿದರೋ ಗೊತ್ತಿಲ್ಲ ಪರಿಸ್ಥಿತಿಯೇ ತಳ್ಳಿತೊ ಅಥವಾ ಬುದ್ಧಿಪೂರ್ವಕವಾಗಿ ಏನಾದರೂ ತೀರ್ಮಾನ ತೆಗೆದುಕೊಂಡರೊ ಹಾಗೆ ಏನೂ ಒಂದು ಆಡ್‌ಹಾಕ್ ಡಿಸಿಷನ್ ಆಯಿತೊ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಪರಿಸ್ಥಿತಿಯನ್ನು ಸರಿಪಡಿಸಿ,

ಶ್ರೀ ಕೆ. ಹೆಚ್. ರಂಗನಾಥ್.—ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ ಆದರೆ ನಾವು ತೆಗೆದುಕೊಳ್ಳುವ ತೀರ್ಮಾನದಿಂದ ಎಲ್ಲರಿಗೂ ಅನುಕೂಲ ಆಗುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ನೇಮಕಾತಿಯನ್ನು ಮಾಡುತ್ತೇವೆಂದು ತಾವು ಹೇಳುವುದಾದರೆ, ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡತಕ್ಕದ್ದು ನೋಡಿದರೆ ಬಹುಶಃ ಇನ್ನೂ ಒಂದೆರಡು ವರ್ಷಗಳಕಾಲ ಬೇಕಾಗುತ್ತದೆ. ಆಲ್ಲಿಯವರೆಗೂ ಇವರು ಕೇವಲ ೬೦೦ ರೂಪಾಯಿಗಳಲ್ಲಿಯೇ ದುಡಿಯಬೇಕಾಗುತ್ತದೆ. ಅವರು ಇವತ್ತು ಒಂದು ಸಾವಿರ ರೂಪಾಯಿ ಸಂಬಳ ಕೊಡಿ ಎಂದು ಏನು ಕೇಳಿಕೊಂಡಿದ್ದಾರೆ ಇಷ್ಟು ಕೊಟ್ಟರೂ ನಿಮಗೆ ಜಾಸ್ತಿ ಏನೂ ಆಗುವುದಿಲ್ಲ. ಇವತ್ತು ಫುಲ್ ಟೈಂ ಟೀಚರ್ಸ್‌ಗೆ ೨೫೦೦ ರೂಪಾಯಿ ಕೊಡುತ್ತಿದ್ದೀರಿ, ಇವರಿಗೆ ೧೮೦೦ ರೂಪಾಯಿ ಕೊಟ್ಟರೆ ಏನೂ ಲಾಸ್ ಆಗುವುದಿಲ್ಲ. ದಯವಿಟ್ಟು ಅವರಿಗೆ ೧೦೦೦ ರೂಪಾಯಿ ಸಂಬಳ ಕೊಡುವ ವಿಚಾರವನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ೨೮೦೦ ರೂಪಾಯಿ ಸಂಬಳ ಕೊಡಬೇಕಾದರೆ ಆತ ಎಂ. ಎ. ಮಾಡಿಕೊಂಡು ಬಂದಿರುತ್ತಾನೆ ನಾವು ಏಕಾಏಕಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಷ್ಟು ಪೋಸ್ಟ್‌ಗಳ ಅವಶ್ಯಕತೆ ಇದೆ ಎಂಬುದನ್ನು ಅಸೆಸ್ ಮಾಡಿಕೊಂಡು ತದನಂತರ ನಾವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಮತ್ತೆ ಯಥಾ ಪ್ರಕಾರ ಈ ಪರಿಸ್ಥಿತಿಗೆ ಅವರನ್ನು ತರತಕ್ಕಂಥಾದ್ದು, ಅವರ ಬೇಡಿಕೆ ಮುಂದಿಡತಕ್ಕಂಥಾದ್ದು, ಅಮರಣಾಂತ ಉಪವಾಸ ಮಾಡತಕ್ಕಂಥಾದ್ದು ಏನಿದೆ ಇದು ಯಾರಿಗೂ ಕೂಡ ಒಳ್ಳೆಯದಲ್ಲ. ಇವತ್ತು ನಾವು ಹಳ್ಳಿಗಾಡಿನಲ್ಲಿ ಕಾಲೇಜುಗಳನ್ನು ತೆರೆಯುತ್ತೇವೆ. ಅಲ್ಲಿಗೆ ಲೆಕ್ಚರರ್ಸ್‌ನ್ನು ನೇಮಕ ಮಾಡುತ್ತೇವೆ. ಹಳ್ಳಿಗಾಡಿನ ಪದವೀಧರರಲ್ಲಿ ಏನು ವಿದ್ಯಾ ಮಟ್ಟ ಇರಬೇಕೋ ಅದು ಇರುವುದಿಲ್ಲ. ಪದವೀಧರರ ವಿದ್ಯಾ ಮಟ್ಟದ ಬಗ್ಗೆ ಮೊನ್ನೆ ಕರ್ನಾಟಕ ಧಾರವಾಡ ಯೂನಿವರ್ಸಿಟಿಯಲ್ಲಿ ಡಾ॥ ಸಿ. ಎನ್. ಆರ್. ರಾವ್ ರವರು ಮಾತನಾಡುತ್ತಾ ನಮ್ಮ ಪರದೇಶಗಳಲ್ಲಿ ಪದವೀಧರರಿಗೆ ಏನು ಬೆಲೆ ಇತ್ತು ಆ ಬೆಲೆ ಕೆಳಗೆ ಹೋಗುತ್ತಾ ಇದೆ ಎನ್ನುವ ಮಾತನ್ನು ಹೇಳುತ್ತಾ ಇದ್ದರು. ಇವತ್ತು ನಾವು ಹಳ್ಳಿಗಾಡಿಗೆ ವಿದ್ಯೆಯನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ಇಂತಹ ಒಂದು ಕೆಟ್ಟ ವಿದ್ಯೆಯನ್ನು ತೆಗೆದುಕೊಂಡು ಹೋಗುವುದು ಅಂದರೆ ಅದನ್ನು ಮಾಡುವುದಕ್ಕಿಂತ ಸುಮ್ಮನೆ ಇರುವುದು ಒಳ್ಳೆಯದಾಗುತ್ತದೆ. ಮಾನ್ಯ ಸದಸ್ಯರು ಬಹಳ ಅನುಕಂಪದಿಂದ ಹೇಳುತ್ತಿದ್ದಾರೆ. They are not wage-earners. They are Professors. Lecturers and they are going to train the people. ಅವರು ವೇಜ್ ಅರ್ನರ್ಸ್ ಆದರೆ ನಾವು ಈ ಮಾತನ್ನು ಆಡಬಹುದು ಆದ್ದರಿಂದ ನಾವು ನೋಡತಕ್ಕಂಥ ದೃಷ್ಟಿಕೋನವೇ ಬೇರೆ ಆಗಿರಬೇಕೆಂದು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ,

ನಿಯಮ ೩೩೪ರ ಮೇರೆಗೆ

೧ ಇಂಡಿಯನ್ ಫ್ಲೈವುಡ್ ಕಂಪನಿಯ ಕಾರ್ಮಿಕರು ಮುಷ್ಕರ ಹೂಡಿರುವುದು

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಇಂಡಿಯನ್ ಪ್ಲೈವುಡ್ ಕಂಪನಿಯವರದ್ದು ಪ್ಲೈವುಡ್ ಕಾರ್ಖಾನೆಗಳಿದ್ದು (೧) ಧಾರವಾಡ (೨) ದಾಂಡೇಲಿ (೩) ಅಂಗರಕಳು (೪) ನೆಟ್ಟಾಣಿ ಈ ನಾಲ್ಕು ಕಾರ್ಖಾನೆಗಳಲ್ಲಿ ಒಟ್ಟು ೨೫೦೦ ಕಾರ್ಮಿಕರಿದ್ದಾರೆ. ದಿನಾಂಕ ೩೦-೬-೮೯ಕ್ಕೆ